ಆ) ಈ ತಾಲ್ಲೂಕಿನಲ್ಲಿ 1997-98 ರಲ್ಲಿ ಯಾವುದೇ ಹೊಸ ಪೋಲೀಸ್ ಠಾಣೆಗಳು ತೆರೆದಿರುವುದಿಲ್ಲ.

ಬೆಂಗಳೂರು ನಗರದ ಹೆಚ್. ಆರ್. ಬಿ. ಆರ್. ಬಡಾವಣೆಗಳಲ್ಲಿ ಅನಧಿಕೃತ ಕಟ್ಟಡಗಳು

291 (318) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಬೆಂಗಳೂರು ನಗರದ ಹೆಚ್. ಆರ್. ಬಿ. ಆರ್. ಬಡಾವಣೆಯಲ್ಲಿ ಮರಿಯಪ್ಪ ವೃತ್ತದ ಪೂರ್ವಕ್ಕೆ ಬಿ. ಡಿ. ಎ. ಬಡಾವಣೆಯಾಗಿರುವ ಕಲ್ಯಾಣ ನಗರದಲ್ಲಿ (ನಾಲ್ಕನೇ ಕ್ರಾಸ್) ಉತ್ತರ ದಿಕ್ಕಿಗೆ ಮುಖಮಾಡಿ ನಿರ್ಮಾಣವಾಗಿರುವ ಅನೇಕ ಮಳಿಗೆಗಳನ್ನು ನಾಲ್ಕು ಅಂತಸ್ತಿನ ಕಟ್ಟಡವನ್ನೂ ಹಾಗೂ ದೂರವಾಣಿ ಇಲಾಖೆ ಬಾಡಿಗೆಯ ಮೇಲೆ ನಡೆಯುತ್ತಿರುವ ಕಟ್ಟಡಗಳನ್ನು ನಿರ್ಮಿಸಲು ಬಿ. ಡಿ. ಎ. ಅಥವಾ ಬಿ. ಸಿ. ಸಿ. ಅಥವಾ ಸರ್ಕಾರದ ಇನ್ನಾವುದೇ ಇಲಾಖೆ ಅನುಮತಿ ನೀಡಿರುವುದೇ ಅಥವಾ ಇವುಗಳು ಅನಧಿಕೃತ ಕಟ್ಟಡಗಳೇ?

2. ಇವು ಅನಧಿಕೃತ ಕಟ್ಟಡಗಳಾಗಿದ್ದಲ್ಲಿ ಇವುಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು

3. ಇವುಗಳ ನಿರ್ಮಾಣದಿಂದ ಈ ಬಡಾವಣೆಯಲ್ಲಿರುವ ಜನರಿಗೆ ತೊಂದರೆಯಾಗಿರುವುದು ಸರ್ಕಾರವು ಗಮನಿಸಿರುವುದೇ ಹಾಗೂ ಈ ಮಳಿಗೆಗಳನ್ನು ಕಟ್ಟಿದವರು ರಸ್ತೆ ಬದಿಯಲ್ಲಿ ಬಿ. ಡಿ. ಎ. : ಬಿ. ಸಿ. ಸಿ. ಯವರು ನಿರ್ಮಾಣ ಮಾಡಿರುವ ಚರಂಡಿಗಳನ್ನು ಮುಚ್ಚಿರುವುದು ಅಲ್ಲದೆ ಫುಟ್ ಬಾತ್ ಗಳನ್ನು ಆಕ್ರಮಿಸಿರುವುದು ಸರ್ಕಾರ ಗಮನಿಸಿರುವುದೇ?

4. ನಿರ್ಮಾಣದ ಹಂತದಲ್ಲಿರುವ ಅನಧಿಕೃತ ಎನ್ನಲಾದ ಈ ಕಟ್ಟಡಗಳನ್ನು ಸರ್ಕಾರ ತಕ್ಷಣ ನಿರ್ಬಂದಿಸಿ ಮುಂದೆ ಆಗಬಹುದಾದ ತೊಂದರೆಗಳನ್ನು ಈಗಲೇ ನಿವಾರಿಸಬಹುದಲ್ಲವೇ?

5. ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

1. ಸದರಿ ನಿರ್ಮಾಣಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ : ಬೆಂಗಳೂರು ಮಾಹಾನಗರ ಪಾಲಿಕೆ ಅನುಮತಿ ನೀಡಿರುವುದಿಲ್ಲ.

ಅನಧಿಕೃತ ನಿರ್ಮಾಣಗಳ ವಿವರಗಳನ್ನು ಪರಿಶೀಲಿಸಲಾಗುತ್ತಿದ್ದು, ಚರಂಡಿ ಮತ್ತು ಫುಟ್ ಬಾತ್ ಗಳ ಮೇಲೆ ಇರತಕ್ಕಂತಹ ನಿರ್ಮಾಣಗಳ ಸಹಿತ ಅನಧಿಕೃತ ನಿರ್ಮಾಣಗಳನ್ನು ತೆಗೆಸಿ ಹಾಕಲು ಕ್ರಮ ತೆಗೆದುಕೊಳ್ಳಲಾಗುವುದು.

ಮಂಗಳೂರಿನಲ್ಲಿ ಸುಸಜ್ಜಿತ ಜೈಲು ನಿರ್ಮಾಣ

292 (314) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಮಂಗಳೂರಿನಲ್ಲಿರುವ ಸಬ್ ಜೈಲಿನಿಂದ ಇತ್ತೀಚೆಗೆ ಎಷ್ಟು ಮಂದಿ ಕ್ರಿಮಿನಲ್ ಕೈದಿಗಳು ಯಾವ

ರೀತಿ ತಪ್ಪಿಸಿಕೊಂಡಿದ್ದಾರೆ. ಆ ಪೈಕಿ ಸಿಕ್ಕ ಕೈದಿಗಳು ಎಷ್ಟು ಹಾಗೂ ಸಿಗದೇ ಇರುವ ಕೈದಿಗಳೆಷ್ಟು?

2. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಲೆ ದರೋಡೆ, ಸುಲಿಗೆ ಇತ್ಯಾದಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವಾಗ ಇಲ್ಲಿಗೆ ಒಂದು ಸುಸಜ್ಜಿತ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರ ಕೂಡಲೆ ಕ್ರಮ ಕೈಗೊಳ್ಳುವುದೇ?

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :

ಅ) 5 (ಐದು) ಈ ಬಂಧಿಗಳು ಬ್ಯಾರಾಕಿನ ಗೋಡೆಯ ಕಲ್ಲುಗಳನ್ನು ಕಿತ್ತು ಹಾಕಿ ಮುಖ್ಯ ಗೋಡೆ ಹಾರಿ ಪರಾರಿಯಾಗಿದ್ದಾರೆ. ಆ ಪೈಕಿ 4 ಜನರನ್ನು ಪುನರ್ ಬಂಧಿಸಿದ್ದು, ಇನ್ನೊಬ್ಬನನ್ನು ಬಂಧಿಸಬೇಕಾಗಿದೆ.

ಆ) ಈ ಕಾರಾಗೃಹವನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸುವ ಉದ್ದೇಶವಿದ್ದು, ಈ ಬಗ್ಗೆ ರಾಜ್ಯದ ಮುಖ್ಯ ವಾಸ್ತು ಶಿಲ್ಪಿಯವರನ್ನು ನಕ್ಷೆ ತಯಾರಿಸಲು ಕೋರಲಾಗಿದೆ.

ಕರಾವಳಿ ಪ್ರದೇಶದಲ್ಲಿ ಸಮುದ್ರ ಕೊರತೆ

293 (315) ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ಉಳ್ಳಾಲ ವಿಧಾನಸಭಾ ಕ್ಷೇತ್ರದ ಉಳ್ಳಾಲ ಕರಾವಳಿ ಪ್ರದೇಶದಲ್ಲಿ ಎಷ್ಟು ಕಡೆ ಸಮುದ್ರ ಕೊರೆತ ಉಂಟಾಗಿದೆ;

ಆ) ಈ ಪ್ರದೇಶದಲ್ಲಿ ಎಷ್ಟು ಕಡೆ ತಡೆಗೋಡೆ ಕಾಮಗಾರಿ ರಚಿಸಲಾಗಿದೆ; ಇನ್ನು ಎಷ್ಟು ಕಡೆ ಕೆಲಸ ಮಾಡಲು ಬಾಕಿ ಇದೆ;

ಇ) ಉಳ್ಳಾಲದ ಕೋಟೆಪುರ ಪ್ರದೇಶದಲ್ಲಿ ಇತ್ತೀಚೆಗೆ 3 ಸಲ ಸಮುದ್ರ ಕೊರೆತ ಆಗಿದ್ದು, ಸಂಪರ್ಕ ರಸ್ತೆ ಮತ್ತು ಮೀನು ಸಂರಕ್ಷಣಾ ಕೇಂದ್ರಗಳಿಗೆ ಹಾನಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ಹಾಗೂ ಯಾವಾಗ ಪೂರೈಸುವುದು;

ಉ) ಉಳ್ಳಾಲದಲ್ಲಿ ತಡೆಗೋಡೆ ನಿರ್ಮಾಣಕ್ಕೆ ಬೇಕಾಗುವ ಒಟ್ಟು ಹಣವೆಷ್ಟು; ಎಷ್ಟು ಹಣ ಪೂರೈಸಿದೆ. ಬಾಕಿ ಎಷ್ಟು ಹಣ ಬೇಕಾಗುವುದು, ಯಾವಾಗ ಪೂರೈಸುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವಾರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) 17 ಕಡೆ ಸಮುದ್ರ ಕೊರೆತ ಉಂಟಾಗಿದೆ

ಆ) 10 ಕಡೆ ಒಟ್ಟು 1.790 ಕಿ.ಮೀ. ಉದ್ದಕ್ಕೆ ತಡೆ ಗೋಡೆ ರಚಿಸಲಾಗಿದೆ. 7 ಕಡೆ ತಡೆಗೋಡೆ ಕೆಲಸ ಬಾಕಿ ಇದ್ದು, ಇದರಲ್ಲಿ 1 ಕಡೆ ಕೆಲಸವನ್ನು ಪ್ರಾರಂಭಿಸಲಾಗಿದೆ. 2 ಕಾಮಗಾರಿಗಳಿಗೆ ಅಂದಾಜು ಸಿದ್ಧಪಡಿಸಲಾಗಿದೆ. 2 ಕಾಮಗಾರಿಗಳಿಗೆ ಟೆಂಡರ್‌ಗಳು ಬಂದಿದ್ದು, ಅವುಗಳ ಪರಿಶೀಲನೆ